8. ಅಧ್ಯಕ್ಷರ ಅಪ್ಪಣೆ ಮೇರೆಗೆ

ಡಾ: ರಾಜ್‌ಕುಮಾರ್ ಅಪಹರಣ ಕುರಿತು ಚರ್ಚೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ನಾನು ಮಂಡಿಸಿರುವ ಅಡ್ಜರ್ನ್‌ಮೆಂಟ್ ಮೋಷನ್ ಇದೆ.

MR. SPEAKER :—It has been converted for discussion under Rule 69.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ಆ ವಿಷಯದ ಮಹತ್ವವನ್ನು ತಮಗೆ ಹೇಳುತ್ತೇನೆ.

ಅಧ್ಯಕ್ಷರು :— ಅದರ ಮಹತ್ವ ಹೋಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :— ನಾವು ಅಡ್ಜರ್ನ್‌ಮೆಂಟ್ ಮೋಷನ್ ತಂದಾಗ, ಅದನ್ನು ತಾವು ನಿಯಮ 69ರ ಚರ್ಚೆಸಲು ಕನ್‌ವರ್ಟ್ ಮಾಡಿದರೆ, ಅದರ ಮಹತ್ವ ಹೋಗುತ್ತದೆ.

ಅಧ್ಯಕ್ಷರು :— ಅದರ ಮಹತ್ವ ಹೋಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :— ಪ್ರಶ್ನೋತ್ತರ ಅವಧಿಯನ್ನು ಬದಿಗೊತ್ತಿ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಅಡ್ಜರ್ನ್‌ಮೆಂಟ್ ಮೋಷನ್ ತಂದಿದ್ದೇವೆ. ಅದನ್ನು 69ರ ಅಡಿಯಲ್ಲಿ ಕನ್‌ವರ್ಟ್ ಮಾಡಿದರೆ, ಅದರ ಮಹತ್ವ ಹೋಗುತ್ತದೆ. ದಯವಿಟ್ಟು, ಅದಕ್ಕೆ ಮೊದಲ ಆದ್ಯತೆ ಕೊಡಬೇಕೆಂದು ಕೇಳುತ್ತೇನೆ. ಡಾ: ರಾಜ್‌ಕುಮಾರ್‌ರವರ ಅಪಹರಣವಾದ ನಂತರ 108 ದಿವಸಗಳನಂತರ ರಾಜ್‌ರವರು ಇವತ್ತು ಬಿಡುಗಡೆಯಾಗಿದ್ದಾರೆ. ನಂತರ, ಇದರ ಬಗ್ಗೆ ದಿನನಿತ್ಯ ಪತ್ರಿಕೆಯಲ್ಲಿ ಕೆಲವು ಸುದ್ದಿಗಳು ಬರುತ್ತಿರುವುದನ್ನು, ಸ್ಟೇಟ್‌ಮೆಂಟ್‌ಗಳು ಬರುತ್ತಿರುವುದನ್ನು ನೋಡುತ್ತಿದ್ದೇವೆ. ಯಾವ ಬೇಡಿಕೆಗಳನ್ನು ಈಡೇರಿಸಿ, ಡಾ: ರಾಜ್‌ಕುಮಾರ್‌ರವರ ಬಿಡುಗಡೆಯಾಯಿತು? ಅಲ್ಲಿದ್ದ ಮೀಡಿಯೇಟರ್ಸ್ ಯಾರು ಎಂಬ ಪ್ರಶ್ನೆಗಳು ಬರುತ್ತಿವೆ. ಹೀಗಾಗಿ, ಇಡೀ ರಾಜ್ಯದಲ್ಲಿ ಇದರ ಬಗ್ಗೆ ಇವತ್ತು ಚರ್ಚೆಯಾಗುತ್ತಿದೆ. ಡಾ: ರಾಜ್‌ಕುಮಾರ್‌ರವರ ಸುರಕ್ಷಿತ ಬಿಡುಗಡೆ ಆಯಿತು. ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಬಹಳ ಒಳ್ಳೆಯದಾಯಿತು. ನಮ್ಮ ರಾಜ್ಯ ಸರ್ಕಾರ ತೆಗೆದುಕೊಂಡ ಕ್ರಮಗಳಿರಬಹುದು, ತಮಿಳುನಾಡು ಸರ್ಕಾರ ತೆಗೆದುಕೊಂಡ ಕ್ರಮಗಳಿರಬಹುದು, ಇದರಲ್ಲಿ ಭಾಗವಹಿಸಿದ ಸಂಘ-ಸಂಸ್ಥೆಗಳಿರಬಹುದು, ಎಲ್ಲರೂ ರಚನಾತ್ಮಕವಾಗಿ ಕೆಲಸ ಮಾಡಿ, ಡಾ: ರಾಜ್‌ಕುಮಾರ್‌ರವರ ಸುರಕ್ಷಿತ ಬಿಡುಗಡೆಗೆ ಎಲ್ಲರ ನೆರವು ಸಿಕ್ಕಿತ್ತು. ಇದು ಬಹಳ ಸಂತೋಷದ

ಸಂಗತಿ. ಆದರೆ, ಇವತ್ತು ಕೇವಲ ಡಾ: ರಾಜ್‌ಕುಮಾರ್‌ರವರ ಬಿಡುಗಡೆಯಾಗಿ ಅಲ್ಲಿಗೆ ನಾವು ತೃಪ್ತಿಪಡುವಂಥ ಪರಿಸ್ಥಿತಿ ಇಲ್ಲ. ಹಿಂದೆ, ಮಾನ್ಯ ಮುಖ್ಯಮಂತ್ರಿಗಳು, ಸರ್ವಪಕ್ಷಗಳ ಸಭೆ ಕರೆದ ಸಂದರ್ಭದಲ್ಲಿ, ರಾಜ್‌ಕುಮಾರ್‌ರವರ ಸುರಕ್ಷಿತ ಬಿಡುಗಡೆಯಾದ ನಂತರ ಮುಂದಿನ ಕ್ರಮ, ಕಾರ್ಯಾಚರಣೆ ತೆಗೆದುಕೊಳ್ಳಲು ತಯಾರಿರಬೇಕೆಂದು ನಾವು ಪ್ರತಿ ಹಂತದಲ್ಲಿಯೂ ಹೇಳುತ್ತಿದ್ದೇವು. ಅದರ ಬಗ್ಗೆ ಒಂದು ಸಲ ವಿಚಾರ ಮಾಡಿ ಎಂದು ಹೇಳಿದ್ದೇವೆ. ಇವತ್ತು ಮುಖ್ಯಮಂತ್ರಿಗಳು All party Meeting ಕರೆದಿದ್ದಾರೆ. ಇವತ್ತು ಸದನ ನಡೆಯುತ್ತಿದೆ. ಸಾಕಷ್ಟು ಶಾಸಕರು ಇದರ ಬಗ್ಗೆ ಚರ್ಚೆ ಮಾಡಬೇಕೆಂದಿದ್ದಾರೆ. ಹಿಂದೆ ಈ ಬಗ್ಗೆ ಚರ್ಚೆಗೆ ಬಂದಾಗ, ಅಡ್ಜರ್ನ್‌ಮೆಂಟ್ ಮೋಷನ್ ಇರಬಹುದು, ನಿಯಮ 69 ಇರಬಹುದು, ಆ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ರೂಲಿಂಗ್ ಕೊಟ್ಟು, ಸುಪ್ರೀಂಕೋರ್ಟಿನಲ್ಲಿ ಕೇಸ್ ಇದ್ದು, ಅದು ಮುಗಿದ ನಂತರ, ಇದನ್ನು ಚರ್ಚೆಗೆ ತೆಗೆದುಕೊಳ್ಳೋಣವೆಂದಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದರು. ಈ ವಿಷಯ ಸಾಕಷ್ಟು ಸಲ ಚರ್ಚೆಗೆ ಬಂದಾಗ, ಡಾ: ರಾಜ್ ಕುಮಾರ್‌ರವರು ಮೊದಲು ಬಿಡುಗಡೆಯಾಗಲಿ, ನಂತರ ಸದನದಲ್ಲಿ ಇದರ ಬಗ್ಗೆ ಚರ್ಚೆ ಮಾಡೋಣ, ಎಲ್ಲರಿಗೂ ಮಾತನಾಡಲು ಅವಕಾಶ ಕೊಡುವುದಿದೆ ಎಂದು ಅಧ್ಯಕ್ಷರು, ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದರು. ಇವತ್ತು ಇದರ ಬಗ್ಗೆ ಕೆಲವೊಂದು ಕಾಂಪ್ರಾಡಿಕ್ಟರಿ ಸ್ಟೇಟ್‌ಮೆಂಟ್‌ಗಳು ಪ್ರತಿನಿತ್ಯ ಬರುತ್ತಿವೆ. ನಾವು ಸಂಧಾನಕಾರರಾದ ಶ್ರೀ ಆರ್.ಆರ್. ಗೋಪಾಲ್‌ರವರನ್ನು ಕಳುಹಿಸುತ್ತೇವೆಂದು ಹೇಳಿದ್ದರು.

ಅಧ್ಯಕ್ಷರು :— ಈಗ ಆ ಡೀಟೇಲ್ಸ್‌ಗೆ ಹೋಗಬೇಡಿ.

ಶ್ರೀ ಜಗದೀಶ್ ಶೆಟ್ಟರ್ :— ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು :— ಸುಮಾರು ಮೂರು ತಿಂಗಳಿನಿಂದ ವಿರೋಧ ಪಕ್ಷದ ನಾಯಕರು ಮತ್ತು ಅನೇಕ ಪಕ್ಷಗಳ ಅಧ್ಯಕ್ಷರುಗಳ ಆಲ್ ಪಾರ್ಟಿಮೀಟಿಂಗ್ ಕರೆದು, ಬೇಕಾದಷ್ಟು ಸಹಕಾರವನ್ನು ತಾವು ಕೊಟ್ಟಿದ್ದೀರಿ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇವತ್ತು ಸಭಾನಾಯಕರು ಆಲ್ ಪಾರ್ಟಿ ಮೀಟಿಂಗ್ ಕರೆದಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :— ಆಲ್ ಪಾರ್ಟಿ ಮೀಟಿಂಗ್‌ನಲ್ಲಿ ಇವತ್ತು ಮುಂದಿನ ಕಾರ್ಯಾಚರಣೆ ಬಗ್ಗೆ ಇರಬಹುದು, ಸಮಸ್ಯೆಯನ್ನು ಯಾವ ರೀತಿ ಟ್ಯಾಕಲ್ ಮಾಡಬೇಕೆಂದಿರುವ ಬಗ್ಗೆ ಚರ್ಚೆ ನಡೆಸಲು ಕರೆದಿರಬಹುದು. ಅದರ ಬಗ್ಗೆ ಚರ್ಚೆ ಮಾಡೋಣ. ಇವತ್ತು ರಾಜ್ಯದ ಜನರಲ್ಲಿ ಕೆಲವು ಸಂಶಯಗಳು ಹುಟ್ಟಿವೆ.

ಅಧ್ಯಕ್ಷರು :— ಇಲ್ಲವೆಂದು ನಾನು ಹೇಳುತ್ತಿಲ್ಲ. ಸಭಾನಾಯಕರು ನಿನ್ನೆ ನನಗೆ ತಿಳಿಸಿದ್ದು, ಇಂದು ಸಾಯಂಕಾಲ 6.30ಕ್ಕೆ ಆಲ್ ಪಾರ್ಟಿ ಮೀಟಿಂಗ್ ಕರೆದಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :— ಚರ್ಚೆ ಮಾಡಲೇನು ತೊಂದರೆ?

ಅಧ್ಯಕ್ಷರು :— ಈ ವಿಷಯವನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಅರಗ ಜ್ಞಾನೇಂದ್ರ :— ಆಲ್ ಪಾರ್ಟಿ ಮೀಟಿಂಗ್‌ನಲ್ಲೇ ಡಿಸೈಡ್ ಆಗುವುದಾದರೆ, ಈ ಸದನದ ಅವಶ್ಯಕತೆ ಏನು? ಸುಪ್ರೀಂಕೋರ್ಟ್‌ನಲ್ಲಿ ಕೇಸ್ ಇತ್ತು, ಡಾ: ರಾಜ್ ಕುಮಾರ್‌ರವರ ಜೀವನಕ್ಕೆ ತೊಂದರೆ ಇತ್ತು ಎಂದು ಆಗ ಹೇಳಿದರು.

ಶ್ರೀ ಎಸ್.ಎಂ. ಕೃಷ್ಣ ಮಾನ್ಯ (ಮುಖ್ಯಮಂತ್ರಿಗಳು) :— ಯಾರಾದರೂ ಚರ್ಚೆಗೆ ವಿರೋಧ ಮಾಡುತ್ತಿದ್ದಾರೆಯೇ?

ಶ್ರೀ ಅರಗ ಜ್ಞಾನೇಂದ್ರ :— ಇವತ್ತು ಅಧ್ಯಕ್ಷರು ರೂಲಿಂಗ್ ಕೊಡುತ್ತಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ :— ಅವರು ರೂಲಿಂಗ್ ಕೊಡುತ್ತಿಲ್ಲ, ಸಲಹೆ ಕೊಡುತ್ತಿದ್ದಾರೆ. ಈಗ ತಾನೇ ಮಾನ್ಯ ವಿರೋಧ ಪಕ್ಷದ ನಾಯಕರು, ಸಾಯಂಕಾಲ ಎಲ್ಲ ಪಕ್ಷಗಳ ನಾಯಕರ ಸಭೆ ಕರೆಯಲಾಗಿದೆ ಎಂದು ಹೇಳಿದರು. ಈಗಾಗಲೇ ನಾನು ಸಭಾಧ್ಯಕ್ಷರನ್ನು ಕೋರಿ, ಇದರ ಬಗ್ಗೆ ವಿಶೇಷ ಚರ್ಚೆಗೆ ಅನುವು ಮಾಡಿಕೊಡಬೇಕಾಗುತ್ತದೆ, ಚರ್ಚೆಗೆ ಸರ್ಕಾರದ ವಿರೋಧವಿಲ್ಲ, ಸರ್ಕಾರದ ರಿಸರ್ವೇಷನ್ ಇಲ್ಲ ಎಂದು ಹೇಳಿದ್ದೇನೆ. ಆದರೆ, ಚರ್ಚೆ ಇವತ್ತಲ್ಲ, ನಾಳೆಯಾಗಲಿ ಎಂದು ಹೇಳಿದೆ. ಇವತ್ತು ಚರ್ಚೆಯಾಗದಿದ್ದರೆ, ಏನಾದರೂ ತೊಂದರೆಯಾಗುತ್ತದೆಯೇ?

ಶ್ರೀ ಅರಗ ಜ್ಞಾನೇಂದ್ರ :— ಆಲ್ ಪಾರ್ಟಿ ಮೀಟಿಂಗ್ ಹಿನ್ನೆಲೆಯಲ್ಲಿ ಅದನ್ನು ಮುಂದಕ್ಕೆ ಹಾಕುವುದು ಬೇಡ.

ಶ್ರೀ ಎಸ್.ಎಂ. ಕೃಷ್ಣ :— ಎರಡನ್ನೂ compartmentalise ಮಾಡೋಣ. ಅವರು ಕಾಡಿಗೆ ಹೋಗಿದ್ದವರು, ಊರಿಗೆ ಬಂದರೆಂದು ನಾನು ಆಗಲೇ ಹೇಳಿದೆ.

12.10 ಪಿ.ಎಂ.

ಶ್ರೀ ಅರಗ ಜ್ಞಾನೇಂದ್ರ :— ಅದರ ಹಿನ್ನೆಲೆ ಏನು?

ಶ್ರೀ ಎಸ್.ಎಂ. ಕೃಷ್ಣ :— ಅದರ ಹಿನ್ನೆಲೆ ಏನು ಎಂದು ನಾವು ಮೂರು ತಿಂಗಳಿನಿಂದ ಯೋಚನೆ ಮಾಡಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ :— ಜನಕ್ಕೆ ಗೊತ್ತಾಗಲಿಲ್ಲವಲ್ಲ?

ಶ್ರೀ ಎಸ್.ಎಂ. ಕೃಷ್ಣ :— ಜನಕ್ಕೆ ಚೆನ್ನಾಗಿ ಗೊತ್ತಾಗಿದೆ. ನಿಮಗಿಂತ ಚೆನ್ನಾಗಿ ಜನಕ್ಕೆ ಗೊತ್ತಾಗಿದೆ.

ಶ್ರೀ ಆರಗ ಜ್ಞಾನೇಂದ್ರ :— ಇದರ ಬಗ್ಗೆ ಜನಕ್ಕೆ ಗೊತ್ತಾಗಬೇಕು, ಈ ಸದನದಲ್ಲಿ ಹೇಳಿಕೆ ಕೊಡಬೇಕು ಅದರ ಹಿನ್ನೆಲೆ ಏನು ಎಂಬುದನ್ನು ಹೇಳಬೇಕಾಗುತ್ತದೆ. ಹಾಗಾದರೆ ನಮಗೆ ಕೇಳುವ ಹಕ್ಕು ಇಲ್ಲವೆ? ನಮಗೆ ಕೇಳುವ ಹಕ್ಕು ಇಲ್ಲವೆಂದು ತಾವು ತೀರ್ಪು ಕೊಡುವುದಾದರೆ ಇದಕ್ಕೆ ನಮ್ಮದೇನೂ ತಕರಾರು ಇಲ್ಲ. ನಾವು ಶಾಸಕರಾಗಿ ಈ ಸದನದಲ್ಲಿ ಎಲ್ಲಾ ಮಾಹಿತಿಯನ್ನು ಕೇಳುವ ಹಕ್ಕು ಇದೆ. ತಾವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು :— ತಮಗೆ ಹಕ್ಕು ಇದೆ. ಇಷ್ಟು ದಿವಸ ಸಹಕಾರ ಮಾಡಿದವರು ಇನ್ನು 24 ಗಂಟೆ ಸರಕಾರದ ಜೊತೆಗೆ ಸಹಕಾರ ಮಾಡಿದರಾಯಿತು.

ಶ್ರೀ ಎ. ರಾಮದಾಸ್ :— ಈ ರೀತಿಯಾದ ಉತ್ತರವನ್ನು ರಾಜ್ಯ ನಿರೀಕ್ಷೆ ಮಾಡುತ್ತಿಲ್ಲ. ನಾವು ಇಲ್ಲಿಯವರೆಗೆ ಸಹಕಾರ ನೀಡಿದ್ದೇವೆ ಇವತ್ತು ಕೂಡ ನಾವು ಸಹಕರಿಸುತ್ತೇವೆ ಆದರೆ ಈ ರೀತಿ ಉತ್ತರ ಹೇಳಿದರೆ ನಾವು ಹೇಗೆ ಸಹಕರಿಸುವುದು?

ಅಧ್ಯಕ್ಷರು :— ನಾನು ಇದನ್ನು ನಿಯಮ 69 ಆಗಿ ಕನ್‌ವರ್ಟ್ ಮಾಡಿದ್ದೇನೆ. ತಾವು ಹೇಳುವುದಿದ್ದರೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ :— ಸರ್ಕಾರ ಇದರ ಬಗ್ಗೆ ಏನಾಯಿತು ಎಂಬುದರ ಬಗ್ಗೆ ಸದನಕ್ಕೆ ಹೇಳಿಕೆ ಕೊಡುವುದರ ಮೂಲಕ ಶ್ವೇತ ಪತ್ರ ಹೊರಡಿಸಿದರೆ ಜನರಿಗೆ ವಿಷಯ ಗೊತ್ತಾಗುತ್ತದೆ.

ಅಧ್ಯಕ್ಷರು :— ಹೊರಡಿಸುತ್ತಾರೆ ಬಿಡಿ.

ಶ್ರೀ ಎಸ್.ಎಂ. ಕೃಷ್ಣ :— ಸರ್ಕಾರದ ಉದ್ದೇಶ ಏನೆಂದರೆ, ನಾಳೆ ಸದನದಲ್ಲಿ ಒಂದು ಹೇಳಿಕೆ ಮಾಡುತ್ತೇವೆ ಅದು ಬ್ಲಾಕ್ ಬಾರ್ಡರ್ ಹೇಳಿಕೆ ಅಥವಾ ಶ್ವೇತ ಪತ್ರವೋ ನನಗೆ ಗೊತ್ತಿಲ್ಲ ಅಂತೂ ಒಂದು ಹೇಳಿಕೆಯನ್ನು ಮಾಡುತ್ತೇವೆ. ಇದು ರಾಜ್ಯದ ಹಾಗೂ ಜನತೆಯ ಹಿತದೃಷ್ಟಿಯಿಂದ ಹೇಳಬೇಕಾದುದು ಅಗತ್ಯವಾಗಿದೆ. ಮಾನ್ಯ ವಿರೋಧ ಪಕ್ಷದ ನಾಕರೇನು ಸಲಹೆ ಮಾಡಿದ್ದಾರೆ ಅದನ್ನು ನಾನು ಬಹಳ ನಮ್ರತೆಯಿಂದ ಸ್ವೀಕರಿಸುತ್ತೇನೆ.

(ಗೊಂದಲ)

MR. SPEAKER :— No further discussion, please. I have not given my consent. I have converted it under Rule 69.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಹೇಳಿಕೆ ಕೊಟ್ಟ ಮೇಲೆ ನಾಳೆ ಚರ್ಚೆ ಮಾಡಿ ಇದಕ್ಕೆ ಯಾರು ಬೇಡ ಎನ್ನುವುದಿಲ್ಲ.

(ಗೊಂದಲ)

MR. SPEAKER :— I have not given my concent. I have converted it for a discussion under Rule 69.

ಶ್ರೀ ಡಿ.ವಿ. ಸದಾನಂದ ಗೌಡ :— ನಾವು ತುಂಬಾ ಬೇಸರದಿಂದ ಈ ಸದನದಲ್ಲಿ ಒಂದು ವಿಚಾರವನ್ನು ಪ್ರಸ್ತಾಪಿಸಬೇಕಾಗಿದೆ. ಯಾವುದೇ ಒಂದು ವಿಷಯವನ್ನು ಸನ್ಮಾನ್ಯ ಅಧ್ಯಕ್ಷರ ಗಮನಕ್ಕೆ ತರಬೇಕೆಂದು ನಾವು ಏನು ಹೇಳುತ್ತಿದ್ದೇವೆಯೋ ಆ ವಿಷಯವನ್ನು ನಾವು ಹೇಳಿದೆ ಅದಕ್ಕೆ ಮೊದಲೇ ಅಧ್ಯಕ್ಷರು ತೀರ್ಮಾನ ಕೊಡುವಂಥ ಸಂಗತಿ ಏನು ಇದೆ ಇದು ನನಗಂತೂ ಬಹಳ ಬೇಸರ ತಂದಿದೆ.

ಅಧ್ಯಕ್ಷರು :— ನಿಮ್ಮ ಕಡೆಯಿಂದ ಇದೇ ವಿಷಯಕ್ಕೆ 6-7 ಜನರು ಹೇಳುವುದನ್ನು ಕೇಳೋಣವೆ? ಇದೇ ರೀತಿಯಲ್ಲಿ ಎಲ್ಲಾ ಪಕ್ಷದವರು ಕೇಳುತ್ತಾರೆ.

ಶ್ರೀ ಡಿ.ವಿ. ಸದಾನಂದ ಗೌಡ :— ದಯಮಾಡಿ ಕ್ಷಮಿಸಬೇಕು. ಈ ನಿಲುವಳಿ ಸೂಚನೆ ಕೊಟ್ಟದ್ದು ಏಕೆ ಎಂಬುದನ್ನು ನಾವು ನಿಮ್ಮ ಹತ್ತಿರ ಹೇಳಬೇಕಲ್ಲವೆ?

ಅಧ್ಯಕ್ಷರು :— ನಿಮ್ಮ ನಾಯಕರು ಈಗಾಗಲೇ ಹೇಳಿದ್ದಾರೆ.

ಶ್ರೀ ಡಿ.ವಿ. ಸದಾನಂದ ಗೌಡ :— ನಾವು ಎದ್ದು ನಿಲ್ಲುವುದಕ್ಕೆ ಮುಂಚೆ 69ಕ್ಕೆ ಕನ್ ವರ್ಟ್ ಮಾಡಿದ್ದೇನೆಂದು ಹೇಳುತ್ತೀರಿ.

ಅಧ್ಯಕ್ಷರು :— ನಿಮ್ಮ ನಾಯಕರು ಹೇಳಿದ್ದಕ್ಕೆ ನಾನು ಹೇಳಿದ್ದು.

ಶ್ರೀ ಡಿ.ವಿ. ಸದಾನಂದಗೌಡ :— ಈ ರೀತಿಯಾದರೆ ನಾವು ಏಕೆ ನೋಟಿಸ್ ಕಳುಹಿಸಬೇಕು?

ಅಧ್ಯಕ್ಷರು :— 7-8 ಜನ ಸಿಗ್ನೇಚರಿ ಮಾಡಿದರೂ ಮಾತನಾಡಲು ಅವಕಾಶ ಕೊಡುವುದು ಇಬ್ಬರಿಗೆ ಮಾತ್ರ.

ಶ್ರೀ ಜಗದೀಶ್ ಶೆಟ್ಟರ್ :— ನಾವು ಇಲ್ಲಿ ನಿಲುವಳಿ ಸೂಚನೆ ಕಳುಹಿಸಿರುತ್ತೇವೆ ಇದಕ್ಕೆ ತಾವು ಮೊದಲು ಅವಕಾಶ ಕೊಟ್ಟು ಪ್ರಿಲಿಮಿನರಿ ಚರ್ಚೆ ಮಾಡುವುದಕ್ಕೆ ಯಾವುದಾದರೂ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡಬೇಕಲ್ಲವೆ? ತಾವು ಪ್ರಸ್ತಾಪಿಸುವುದಕ್ಕಿಂತ ಮುಂಚೆನೇಯೇ ನೀವು ಕನ್‌ವರ್ಟ್ ಮಾಡಿದರೆ ಹೇಗೆ?

ಅಧ್ಯಕ್ಷರು :— ತಾವು ಭಾಷಣ ಮುಗಿಸಿದ ಮೇಲೆ ನಾನು ನಿಯಮ 69 ಆಗಿ ಕನ್‌ವರ್ಟ್ ಮಾಡಿದ್ದೇನೆಂದು ಹೇಳಿದ್ದು.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಚಂದ್ರೇಗೌಡರವರು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ, ನಾವು ಇವತ್ತು ಮಾನ್ಯ ರಂಗನಾಥರವರು ಆ ದಿನ ಏನು ಮಾಡಿದರೋ ಅದನ್ನು ನಾವು ಪಾಲಿಸುತ್ತಿದ್ದೇವೆ.

(ಗೊಂದಲ)

SRI D.B. CHANDRE GOWDA :— Even No Confidence Motion can be disposedof in the Speaker's chamber. ತಾವು ಇಲ್ಲಿ ಬಹಿರಂಗವಾಗಿ 69ಕ್ಕೆ ಕನವರ್ಟ್ ಮಾಡಿದ್ದೇನೆಂದು ಹೇಳಿದಿರಿ, ನಾಳೆ ಸಭಾನಾಯಕರು ಇಲ್ಲಿ ಹೇಳಿಕೆ ಕೊಡುತ್ತಾರೆ, ನಂತರ ಚರ್ಚೆ ಮಾಡೋಣ.

(ಗೊಂದಲ)

SRI D.B. CHANDRE GOWDA :— Are you re-opening the issue?

(Interruptions)

ಶ್ರೀ ಜಗದೀಶ್ ಶೆಟ್ಟರ್ :— ನಾನು ಇನ್ನು ಪೂರ್ಣವಾಗಿ ಮಾತನಾಡಿ ಮುಗಿಸಿಲ್ಲ, ಮಧ್ಯದಲ್ಲಿಯೇ ಮಾನ್ಯ ಚಂದ್ರೇಗೌಡರವರು ಮಾತನಾಡಿದರೆ ಹೇಗೆ? ಮಾನ್ಯ ಅಧ್ಯಕ್ಷರು ಕೊಟ್ಟಿರುವ ರೂಲಿಂಗ್‌ನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಸಾಮಾನ್ಯವಾಗಿ ನಾವು ಯಾವುದೇ ರೂಪದಲ್ಲಿ ಚರ್ಚೆಗೆ ನೋಟೀಸ್ ಕೊಟ್ಟಂಥ ಸಂದರ್ಭದಲ್ಲಿ ತಾವು ತಮ್ಮ ಕೊಠಡಿಯಲ್ಲಿ ಕರೆದು ಆ ಬಗ್ಗೆ ಕೇಳಬಹುದು, ಆದರೆ ಅದು ಕೂಡ ಇವತ್ತು ಆಗುತ್ತಿಲ್ಲ. ನಾವು ಯಾವುದೇ ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿದಾಗ ತಾವು ನಮಗೆ ಪ್ರಾರಂಭಿಕ ಚರ್ಚೆಗೆ ಅವಕಾಶ ಕೊಟ್ಟು ನಂತರ ತಾವು ಅದನ್ನು ಯಾವುದೇ ರೂಪದಲ್ಲಿ ಚರ್ಚೆಗೆ

ಅವಕಾಶ ಕೊಡಿ, ಇದಕ್ಕೇನು ನಮ್ಮ ಅಭ್ಯಂತರವಿಲ್ಲ. ಈ ಸಂದರ್ಭದಲ್ಲಿ ನಮಗೆ ನಿಮ್ಮ ಮನವೊಲಿಸುವುದಕ್ಕೆ ಅವಕಾಶವಿರುತ್ತದೆ.

ಅಧ್ಯಕ್ಷರು :— ನನ್ನ ಕೊಠಡಿಗೆ ಬಂದಾಗ ಒಂದು ನಿಮಿಷ ರೈಸ್ ಮಾಡುತ್ತೇವೆಂದು ತಾವು ನನ್ನಲ್ಲಿ ಮನವಿ ಮಾಡಿಕೊಳ್ಳುತ್ತೀರಿ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ಸದನ ನಡೆಸುವುದಕ್ಕೆ ಹಾಗೂ ನಮ್ಮ ಮೇಲೆ ಸಂಪೂರ್ಣವಾದ ವಿವೇಚನಾ ಶಕ್ತಿ ನಿಮ್ಮಲ್ಲಿದೆ. ತಾವು ಒಂದು ಸಲ ಕೊಟ್ಟಿರುವ ರೂಲಿಂಗ್ ಬಗ್ಗೆ ನಾವು ಎಂದೂ ಚಾಲೆಂಜ್ ಮಾಡಿಲ್ಲ, ಮಾಡುವುದಿಲ್ಲ. ಆದರೆ ತಾವು ರೂಲಿಂಗ್ ಕೊಡುವುದಕ್ಕಿಂತ ಮುಂಚೆ ನಾವುಗಳು ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :— ತಾವು ಸಬ್‌ಮಿಷನ್ ಮಾಡಿದ ಮೇಲೆ ನಾನು ಹೇಳಿದ್ದು. ಪರಸ್ಪರ ಹೊಂದಾಣಿಕೆಯ ಮೇರೆಗೆ ನಾವು ಮಾತನಾಡುವುದಕ್ಕೆ ಅವಕಾಶ ಕೊಡುತ್ತೇವೆ.

ಶ್ರೀ ಡಿ.ವಿ. ಸದಾನಂದ ಗೌಡ :— ನನ್ನ ಅನುಭವದಲ್ಲಿ ಹೇಳುವುದಾದರೆ ಹಿಂದಿನ ಸಭೆಗಳಲ್ಲಿ ನಾವು ತಮ್ಮ ಕಛೇರಿಗೆ ಬಂದು ನೋಟಿಸ್ ಕೊಟ್ಟ ಮೇಲೆ ಸದನದ ಒಳಗಡೆ ಬಂದಾಗ ಅದರ ಬಗ್ಗೆ ಪ್ರಿಲಿಮಿನರಿ ಚರ್ಚೆಗೆ ಅವಕಾಶ ಕೊಟ್ಟ ನಂತರ ಯಾವ ರೂಪದಲ್ಲಿ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ನಿರ್ಧರಿಸುತ್ತಾರೆ. ಆದರೆ ಇಲ್ಲಿ ವಿಷಾದವೆಂದರೆ, ಸರ್ಕಾರದವರು ಹೇಳುತ್ತಾರೆ, ಈಗಾಗಲೇ ಅಧ್ಯಕ್ಷರು ತೀರ್ಮಾನ ಕೊಟ್ಟಿದ್ದಾರೆಂದು. ನಮ್ಮ ಸಬ್‌ಮಿಷನ್ ಏನೆಂದರೆ, ತಾವು ಯಾವುದೇ ರೀತಿಯಿಂದ ಪೂರ್ವಗ್ರಹಪೀಡಿತರಾಗಿ ಯಾವುದೇ ತೀರ್ಮಾನಕ್ಕೆ ಬರಬಾರದು. ನಾವುಗಳು ಸಬ್‌ಮಿಷನ್ ಮಾಡುವುದಕ್ಕಿಂತ ಮುಂಚೆ ಪೂರ್ವಯೋಜಿತವಾಗಿ ಇಂಥದ್ದಕ್ಕೆ ಹೀಗೆ ತೀರ್ಮಾನ ಕೊಡುತ್ತೇವೆಂದು ತಾವು ಆಲೋಚಿಸಿದ್ದರೆ ಪ್ರಾಯಶಃ ಈ ಸದನದ ಸದಸ್ಯರು ಯಾರು ಕೂಡ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು :— ಆ ರೀತಿ ಇಲ್ಲ. ದಯಮಾಡಿ ತಾವು ತಪ್ಪು ತಿಳಿದುಕೊಳ್ಳಬೇಡಿ.

ಶ್ರೀ ಬಿ.ಸೋಮಶೇಖರ್ :— ಅಧ್ಯಕ್ಷರು ಚರ್ಚೆಗೆ ಅವಕಾಶ ಕೊಡಿಸಿದ್ದಕ್ಕಾಗಿ ಸಂತೋಷವಾಗಿದೆ. ಏಕೆಂದರೆ, ಸರ್ಕಾರವನ್ನು ಬಹಳ ಅತ್ತು ಕರೆದು ಈ ವಿಚಾರವನ್ನು ಇಲ್ಲಿ ತೆಗೆದುಕೊಳ್ಳುವುದಕ್ಕೆ ಕಷ್ಟಪಟ್ಟಿದ್ದಕ್ಕೆ ಕೊನೆಗೂ ಅವಕಾಶ ಸಿಕ್ಕಿದೆ. ಬಹುಶಃ ಸಚಿವರುಗಳೂ ಕೂಡ ಇದಕ್ಕೆ ಅನುಕೂಲಕರವಾಗಿದ್ದರಿಂದ ಈ ರೀತಿಯಾಯಿತು. ಒಂದು ಸಲ ಸರ್ವೋಚ್ಚನ್ಯಾಯಾಲಯದವರು ತೀರ್ಪು ಕೊಟ್ಟರು. ನಂತರ ರಾಜ್ಯಪುನರ್‌ರಚನೆಯವರನ್ನು ಬಿಡುಗಡೆ ಮಾಡಿದರು.ಈಗ ಸರ್ಕಾರ ಚರ್ಚೆಗೆ ಒಪ್ಪಿದೆ. ನನ್ನ ಸಲಹೆ ಏನೆಂದರೆ,

ಯಾವುದೇ ಸಂದರ್ಭದಲ್ಲಾದರೂ ಕೂಡ ಮಾನ್ಯ ಮುಖ್ಯಮಂತ್ರಿಗಳಿಗಾಗಲೀ ಅಥವಾ ಯಾರೇ ಸಚಿವರಾಗಲಿ ಅವರಿಗೆ ಇಲ್ಲಿ ಹೇಳಿಕೆಯನ್ನು ಕೊಡತಕ್ಕಂಥ ಅಧಿಕಾರ ಅವರಿಗಿರುತ್ತದೆ. ಆದರೆ, ನನ್ನ ಸಲಹೆ ಏನೆಂದರೆ, ನಾವು ಅನೇಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಬೇಕಾಗಿದೆ, ವಿರೋಧ ಪಕ್ಷದ ನಾಯಕರು, ನಮ್ಮ ಪಕ್ಷದ ನಾಯಕರು ಹಾಗೂ ಇತರ ಪಕ್ಷದವರು ಕೂಡ ಈ ರಾಜ್‌ಕುಮಾರ್ ಅಪಹರಣದ ವಿಷಯವಾಗಿ ಸಂಪೂರ್ಣವಾಗಿ ಚರ್ಚೆಯಾಗಬೇಕು ಎನ್ನುವ ಉದ್ದೇಶ ಇದೆ. ಚರ್ಚೆಯಾದ ನಂತರ ನಮ್ಮ ಅಭಿಪ್ರಾಯಗಳೆಲ್ಲವನ್ನೂ ಕ್ರೋಢೀಕರಣ ಮಾಡಿ ಉತ್ತರವನ್ನು ಕೊಟ್ಟರೆ ಬಹಳ ಚೆನ್ನಾಗಿರುತ್ತದೆ. ಇದರ ಬದಲಾಗಿ ನೀವು ಮೊದಲೇ ಹೇಳಿಕೆ ಕೊಟ್ಟ ನಂತರ ನಾವು ಚರ್ಚೆ ಪ್ರಾರಂಭಿಸಿದರೆ ನೀವು ಪುನಃ ಉತ್ತರಿಸಬೇಕಾಗುತ್ತದೆ. ಆದ್ದರಿಂದ, ನನ್ನ ಸಲಹೆ ಏನೆಂದರೆ, ಸಂಪೂರ್ಣವಾಗಿ ಚರ್ಚೆಯಾದ ನಂತರ ಹೇಳಿಕೆ ಕೊಡುವುದು ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ಕೆ.ಹೆಚ್. ರಂಗನಾಥ್ :— ಒಂದು ವೇಳೆ ಇಲ್ಲಿ ಕೊಡುವ ಹೇಳಿಕೆಯಿಂದ ಚರ್ಚೆಗೆ ಸಹಾಯವಾಗಬಹುದಲ್ಲವೆ?

ಶ್ರೀ ಕೆ. ಶ್ರೀನಿವಾಸಗೌಡ ಕುದಮನಹಳ್ಳಿ :— ಹಾಗಾದರೆ ಎಲ್ಲರೂ ಏಕೆ ಹೇಳಬೇಕು ನೀವು ಒಂದು ಹೇಳಿಕೆ ಕೊಡಿ ಅದನ್ನೇ ನಾವು ಕೇಳಿ ಕುಳಿತುಕೊಂಡುಬಿಡೋಣ.

ಶ್ರೀ ಬಿ. ಸೋಮಶೇಖರ್ :— ಡಾ: ರಾಜ್ ಕುಮಾರ್‌ರವರು ಬಿಡುಗಡೆಯಾದ ದಿನಸ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದರು. ಚರ್ಚೆಗೆ ಅನುಕೂಲವಾದ ರೀತಿಯಲ್ಲಿ ನಮಗೆ ಕೆಲವೊಂದು ಮಾಹಿತಿಗಳನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ಶ್ವೇತಪತ್ರ ಹೊರಡಿಸಬೇಕು, ವೀರಪ್ಪನ್ ಕಳುಹಿಸಿರುವ ಕ್ಯಾಸೆಟ್‌ಗಳನ್ನು ನಮಗೆ ಕೊಡಬೇಕಾಗುತ್ತದೆ. ಏನು ಮಾತುಕತೆಯಾಗಿದೆ, ಏನು ಪತ್ರವ್ಯವಹಾರವಾಗಿದೆ, ಆ ಮುಖ್ಯಮಂತ್ರಿಗಳಿಗೂ ಈ ಮುಖ್ಯಮಂತ್ರಿಗಳಿಗೂ ಏನೇನು ಚರ್ಚೆಯಾಗಿದೆ, ಯಾರ್ಯಾರು ಹೋಗಿದ್ದಾರೆ, ಈ ಎಲ್ಲಾ ವಿಚಾರಗಳನ್ನು ತಿಳಿಸುವುದರ ಜೊತೆಗೆ ಇದರ ನಂತರದಲ್ಲಿ ನಮ್ಮ ರಾಜ್ಯದಲ್ಲಿ ಆಗಿರುವ ಪರಿಣಾಮ, ಏನೇನು ನಷ್ಟವಾಗಿದೆ, ಇತ್ಯಾದಿ ಮಾಹಿತಿಗಳನ್ನೊಳಗೊಂಡಂತೆ ಒಂದು ಶ್ವೇತಪತ್ರವನ್ನು ಸದನದ ಮುಂದೆ ಇಟ್ಟರೆ ಚರ್ಚೆಗೆ ಅನುಕೂಲವಾಗುತ್ತದೆಂದು ನಾನು ಸಲಹೆ ಕೊಟ್ಟಿದ್ದೇನೆ. ಇದನ್ನು ಮಾಡಿದರೆ ಚರ್ಚೆಗೆ ಅನುಕೂಲವಾಗುವುದರ ಜೊತೆಗೆ ನಮಗೂ ಕೂಡ ಸಂತೋಷವಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ :— ಮಾನ್ಯ ಸೋಮಶೇಖರ್‌ರವರು ಸೀಮಿತವಾದಂಥ ಒಪ್ಪಿಗೆಯನ್ನು ನೀಡಿದ್ದಾರೆ. ಅದೇನೆಂದರೆ, ಹೇಳಿಕೆಯಾದ ನಂತರ ನೀವು ಹೋಗಬೇಡಿ ಇಲ್ಲಿ ಇದ್ದು ಚರ್ಚೆಯಾದ ನಂತರ ಪುನಃ ಏನಾದರೂ ಹೇಳುವುದಿದ್ದರೆ ಅದನ್ನು ಹೇಳಿ ಎಂದರು. ನಾನು ಇದನ್ನು ಒಪ್ಪುತ್ತೇನೆ. ಮಾನ್ಯ ರಂಗನಾಥ್‌ರವರು ಹೇಳಿದ ಹಾಗೆ,

ನಾವು ಕೊಡುವಂಥ ಹೇಳಿಕೆ ಚರ್ಚೆಗೆ ಸಹಾಯಕವಾಗಬಹುದು, ಪೂರಕವಾಗಬಹುದು, ಅನುಕೂಲಕರವಾಗಬಹುದು, ಏಕೆಂದರೆ ಸರ್ಕಾರದ ದೃಷ್ಟಿ ಸದನಕ್ಕೆ ಅರ್ಥವಾಗಬೇಕಾಗುತ್ತದೆ. ಕಳೆದ 40 ವರ್ಷಗಳ ನನ್ನ ಅನುಭವದಲ್ಲಿ ಹೇಳುವುದಾದರೆ, ಇಂಥ ವಿಚಾರಗಳಲ್ಲಿ ಸಾಮಾನ್ಯವಾಗಿ ಸರ್ಕಾರ ಒಂದು ಹೇಳಿಕೆ ಕೊಡುತ್ತದೆ. ಅನಂತರ ಚರ್ಚೆ ನಡೆಯುತ್ತದೆ. ಆ ಮೇಲೆ ಸರ್ಕಾರದ ಪರವಾಗಿ ಹೇಳತಕ್ಕಂಥವರು ಏನಾದರೂ ಇದ್ದರೆ, ಅದನ್ನು ನಾವು ಇಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ. ಮಾನ್ಯ ಸದಸ್ಯರು ಈ ವಿಷಯದ ಬಗ್ಗೆ ಮಾತನಾಡುತ್ತಾ, ಇದರಿಂದ ಸರ್ಕಾರಕ್ಕೆ ಎಷ್ಟು ಲಾಸ್ ಆಯಿತ್ತೆಂದು ಮತ್ತು ಶ್ವೇತಪತ್ರವನ್ನು ಹೊರಡಿಸಬೇಕೆಂದು ಪ್ರಸ್ತಾಪ ಮಾಡಿದರು. 1997ರಲ್ಲಿ ವೀರಪ್ಪನ್ ಕೆಲವರನ್ನು ಹಿಡಿದುಕೊಂಡಿದ್ದಂಥ ಸಂದರ್ಭದಲ್ಲಿ ನೀವು ಶ್ವೇತಪತ್ರವನ್ನು ಹೊರಡಿಸಬೇಕಾಗಿತ್ತು.

ಶ್ರೀ ಬಿ. ಸೋಮಶೇಖರ್ :— ಈಗಿನ ಪರಿಸ್ಥಿತಿ ಆ ಸಂದರ್ಭದಲ್ಲಿ ಉದ್ಭವಾಗಿರಲಿಲ್ಲ.

ಶ್ರೀ ಎಸ್.ಎಂ. ಕೃಷ್ಣ :— ಇವತ್ತು 108 ದಿವಸ ಆಗಿರಬಹುದು. ಆವತ್ತು ಕೇವಲ 19 ದಿವಸ ಆಗಿರಬಹುದಷ್ಟೆ. ಒಟ್ಟಿನಲ್ಲಿ ಆ ಸಂದರ್ಭದಲ್ಲಿ ನೀವು ಶ್ವೇತಪತ್ರವನ್ನು ಹೊರಡಿಸಿದ್ದರೆ, ಇವತ್ತು ನಾವು ಶ್ವೇತಪತ್ರವನ್ನು ಹೊರಡಿಸಬೇಕೆಂದು ನೀವು ಕೇಳಬಹುದಾಗಿತ್ತು. ಆದರೆ, ಶ್ವೇತಪತ್ರ ಹೊರಡಿಸಿ ಎನ್ನತಕ್ಕಂಥ ಅಧಿಕಾರ ಅವರಿಗೆ ಇದೆ. ನಿಮಗೆ ಇಲ್ಲ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥ ವಿಷಯದ ಬಗ್ಗೆ ನಮಗೂ ಕೂಡ ಗೌರವ ಇದೆ. ಅಧಿವೇಶನ ನಡೆಯತಕ್ಕಂಥ ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ನಿಲುವಳಿ ಸೂಚನೆಗೆ ನೋಟೀಸ್‌ನ್ನು ಕೊಡಬಹುದು. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮೊದಲು ನಮ್ಮ ಭಾಗದಲ್ಲಿ ಕುಳಿತಿದ್ದಾಗ, ಯಾವುದೇ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕಿಂತ ಮುಂಚಿತವಾಗಿ ಯಾವುದೇ ರೀತಿಯ ತೀರ್ಮಾನಗಳಾಗಲಿ ಅಥವಾ ತೀರ್ಪುಗಳನ್ನು ಕೊಡತಕ್ಕಂಥ ವ್ಯವಸ್ಥೆಗಳು ಇರಲಿಲ್ಲ. ನನಗೆ ಸರಿಯಾಗಿ ಗೊತ್ತಿಲ್ಲದೇ ಇರುವುದರಿಂದ ತಪ್ಪು ಆಗಿದ್ದರೆ ದಯವಿಟ್ಟು ಕ್ಷಮಿಸಬೇಕು. ಇವತ್ತಿನ ದಿವಸ ನಾವು ಯಾವುದಾದರೊಂದು ವಿಷಯದ ಬಗ್ಗೆ ಇಲ್ಲಿ ನಿಲುವಳಿ ಸೂಚನೆಯ ಮುಖಾಂತರ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೇಳಿದಂಥ ಸಂದರ್ಭದಲ್ಲಿ ಇದನ್ನು ಸಬ್‌ಮಿಷನ್ ಮಾಡುವುದಕ್ಕೂ ಅವಕಾಶ ಕೊಡುತ್ತಿಲ್ಲ. ಇದನ್ನು ಕಳೆದ ಹಲವಾರು ದಿವಸಗಳಿಂದ ನಾವೆಲ್ಲರೂ ಸಹ ನೋಡುತ್ತಿದ್ದೇವೆ. ಪ್ರತಿನಿತ್ಯ ಸಭೆಯ ಪ್ರಾರಂಭದಲ್ಲಿ ಇವರು ತಮ್ಮ ಬಾಯಿ ಚಪಲ ತೀರಿಸಿಕೊಳ್ಳುವುದಕ್ಕೋಸ್ಕರ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬರುತ್ತಾರೆ ಎನ್ನತಕ್ಕಂಥ ಒಂದು ತಪ್ಪು ಕಲ್ಪನೆ ಇಡೀ ಸಮಾಜಕ್ಕೆ ಹೋಗುತ್ತದೆ. ಆದ್ದರಿಂದ, ನಾವು ಸಬ್‌ಮಿಷನ್ ಮಾಡುವುದಕ್ಕಾದರೂ ಅವಕಾಶ ಮಾಡಿ

ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಚಾರದ ಬಗ್ಗೆ ನಾವು ವಿಶಕ್ಕಾಗಿ ಚರ್ಚೆ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆಂದರೆ, ಈ ವಿಷಯ ಹಲವಾರು ದಿನಗಳ ಹಿಂದೆಯೇ ಈ ಸದನದಲ್ಲಿ ಚರ್ಚೆಯಾಗಬೇಕಾಗಿತ್ತು. ಆದರೆ, ಕೋರ್ಟ್ ತೀರ್ಮಾನ ಆಗಲಿ, ಆ ನಂತರ ಡಾ. ರಾಜ್‌ಕುಮಾರ್ ಬಿಡುಗಡೆಯಾಗಿಲಿ, ಚರ್ಚೆಗೆ ತೆಗೆದುಕೊಳ್ಳೋಣವೆಂದು ಹೇಳುತ್ತಾ ಬಂದಿದ್ದೀರಿ. ಈಗ ಡಾ: ರಾಜ್‌ಕುಮಾರ್ ಬಿಡುಗಡೆ ಆದ ಮೇಲೆ ಸಂತೋಷದ ಸಂಭ್ರಮ ಕೂಡ ಆಚರಣೆ ಮಾಡಲಾಯಿತು. ಇದನ್ನು ಕೇವಲ ಎರಡು ದಿವಸಗಳ ಮಾತ್ರ ಅಧಿವೇಶನ ಇದೆ. ಇದರ ಮಧ್ಯದಲ್ಲಿಯೂ ಕೂಡ ಕೆಲವು ತಿದ್ದುಪಡಿಗಳನ್ನು ತರಲಾಗಿದೆ. ಸಂಸದೀಯ ವ್ಯವಹಾರಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಕೆಲವು ಮಂತ್ರಿಗಳು ಹೇಳುತ್ತಿದ್ದಾರೆ. ಇಂಥ ಸಂದರ್ಭದಲ್ಲಿ, ಒಂದು ವಿಷಯದ ಆದ್ಯತೆಯ ಮೇರೆಗೆ ನಾವು ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದೇವೆ. ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ನೀವು ನಮಗೆ ಅವಕಾಶ ಕೊಡದೇ ಇದ್ದರೆ, ನಮ್ಮ ಬಾಯಿ ಕಟ್ಟಿಹಾಕತಕ್ಕಂಥ ಒಂದು ವ್ಯವಸ್ಥೆ ಆಗುತ್ತದೆ. ಆದ್ದರಿಂದ ದಯವಿಟ್ಟು ತಾವು ತಮ್ಮ ವಿಶಾಲವಾದ ಮನಸ್ಸಿನಿಂದ, ಪ್ರತಿ ಪಕ್ಷದಲ್ಲಿ ಕುಳಿತಿರತಕ್ಕಂಥವರು ಈ ಜ್ವಲಂತ ಸಂಸ್ಥೆಯನ್ನು ಇಡೀ ರಾಜ್ಯದ ಜನತೆಗೆ ತಿಳಿಸುತ್ತಾರೆ ಎನ್ನತಕ್ಕಂಥ ಒಂದು ವ್ಯವಸ್ಥೆ ಮಾಡಿಕೊಡಬೇಕು. ಆದ್ದರಿಂದ ನೀವು ನಮಗೆ ಚರ್ಚೆಗೆ ಅವಕಾಶ ಕೊಡಬೇಕು. ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಯವರು ಸುಣ್ಣಬಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ವಿಷಯದ ಬಗ್ಗೆ ಇಷ್ಟು ದಿವಸ ಮುಂದೆ ಹೋಗಲಿ ಎನ್ನತಕ್ಕಂಥ ಭಾವನೆ ಅವರಲ್ಲಿ ಕಾಣುತ್ತಿದೆ. ಈ ರೀತಿ ಆಗುವುದಕ್ಕೆ ತಾವು ಅವಕಾಶ ಕೊಡಬಾರದು. ಆದ್ದರಿಂದ ನಿಲುವಳಿ ಸೂಚನೆಗೆ ತಾವು ಅವಕಾಶ ಮಾಡಿಕೊಡಬೇಕು. ಏಕೆಂದರೆ ಈ ವಿಷಯದ ಬಗ್ಗೆ ದೀರ್ಘವಾಗಿ ಚರ್ಚೆಯಾಗಲಿ.

ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ):— ಮಾನ್ಯ ಅಧ್ಯಕ್ಷರೆ, ನೋಟೀಸ್ ಮತ್ತು ನಿಯಮಾವಳಿಗಳನ್ನು ಎತ್ತಿ ಹಿಡಿಯತಕ್ಕಂಥ ಸ್ಥಾನ ನಿಮ್ಮದು. ಈ ಸಭೆ ನಿರ್ದಿಷ್ಟವಾದ ನಿಯಮಾವಳಿ ಪ್ರಕಾರ ನಡೆಯಬೇಕೆಂದು, ಇದಕ್ಕೆ ಸಂಬಂಧಪಟ್ಟ ಎಲ್ಲಾ ನಿಯಮಗಳನ್ನು ರೂಪಿಸಿ, ಇದನ್ನೆಲ್ಲಾ ನಿಮ್ಮ ಕೈಗೆ ಕೊಟ್ಟು ಇದಕ್ಕೊಂದು ಶಕ್ತಿ ಕೊಡಲಾಗಿದೆ. ಈ ಒಂದು ಹಿನ್ನೆಲೆಯಲ್ಲಿ ನಾವು ಕೊಡತಕ್ಕಂಥ ನೋಟೀಸ್‌ಗೆ ರಕ್ಷಣೆ ಮತ್ತು ಸ್ಯಾಂಟಿಟಿಯನ್ನು ತಾವು ಕೊಡಬೇಕಾಗುತ್ತದೆ. ಮೊನ್ನೆದಿವಸ ಮಾನ್ಯ ಸಹಕಾರ ಮಂತ್ರಿಯವರ ವಿರುದ್ಧ ಹಕ್ಕುಚ್ಯುತಿ ಪ್ರಸ್ತಾವನೆಯನ್ನು ನಾವು ತಂದಾಗ, ಇದು ಹಕ್ಕುಚ್ಯುತಿ ಆಗುತ್ತದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಕನಿಷ್ಠ ಪಕ್ಷ ಒಂದು ಹೇಳಿಕೆಯನ್ನಾಗಲಿ ಕೊಡಬೇಕಾಗಿತ್ತು. ಆದರೆ, ಈ ಸದನದ ಒಳಗೆ ನಾವು ಬರುವುದಕ್ಕಿಂತ ಮುಂಚೆಯೇ ಇದು ಹಕ್ಕುಚ್ಯುತಿ ಆಗುವುದಿಲ್ಲ. ಆದ್ದರಿಂದ ಇದನ್ನು ನಿರಾಕರಿಸಿದ್ದೇನೆಂದು ತಮ್ಮ ಕಛೇರಿಯಿಂದ ನಮಗೊಂದು ಪತ್ರದ ಮುಖೇನ ತಾವು ತಿಳಿಸಿದ್ದೀರಿ. ಈ ರೀತಿಯಾದರೆ, ನಾವು ನೋಟೀಸ್ ಕೊಡುವಂಥ

ಅಗತ್ಯತೆಯಾದರು ಏನು ಬರುತ್ತದೆ? ಈ ವಿಷಯದ ಬಗ್ಗೆ ನಾವು ಇಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ ಎಂಬುದರ ಬಗ್ಗೆ ಇಡೀ ರಾಜ್ಯದ ಜನತೆಗೆ ನಾವು ಇಲ್ಲಿಂದ ಸಂದೇಶವನ್ನು ಕಳುಹಿಸತಕ್ಕಂಥದು ಆಗಬೇಕು. ಆದ್ದರಿಂದ ಈ ವಿಷಯದ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಬೇಕಾಗಿದೆ. ಅನಂತರ ತಾವು ತೀರ್ಪು ಕೊಡಬೇಕಾಗುತ್ತದೆ. ಇದಕ್ಕೆ ಸರ್ಕಾರದ ಕಡೆಯಿಂದಲೂ ಕೂಡ ಕೆಲವು ಅನಿಸಿಕೆಗಳು ಬರಬೇಕಾಗುತ್ತದೆ. ಮಾನ್ಯ ಸಭಾನಾಯಕರು ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾಳೆ ದಿವಸ ಹೇಳಿಕೆಯನ್ನು ಮಾಡುತ್ತೇವೆಂದು ಹೇಳಿದರು. ಬಹುಶಃ ಇದನ್ನು ಡಾ: ರಾಜ್‌ಕುಮಾರ್ ಬಿಡುಗಡೆಯಾದ ದಿನವೆ ಅಥವಾ ಮಾರನೆಯ ದಿವಸ ಸರ್ಕಾರ ಮಾಡಬೇಕಾಗಿತ್ತು.

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರು, ಈ ವಿಷಯವನ್ನು ರೂಲ್ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ, ಆದ್ದರಿಂದ ಈ ವಿಷಯವನ್ನು ಚರ್ಚೆ ಮಾಡುವ ಅಗತ್ಯತೆ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ :— ನಾವು ಮೊದಲು ವಿಷಯವನ್ನು ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ನಾವು ಮಾನ್ಯ ಅಧ್ಯಕ್ಷರ ಮನವೊಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಯಷ್ಟೆ. ಡಾ: ರಾಜ್‌ಕುಮಾರ್ ಬಿಡುಗಡೆಯಾದ ದಿನವೇ ಸರ್ಕಾರ ಹೇಳಿಕೆಯನ್ನು ಕೊಟ್ಟಿದ್ದರೆ ನಾವು ಇವತ್ತು ನಿಲುವಳಿ ಸೂಚನೆಯನ್ನು ತರತಕ್ಕಂಥ ಅವಕಾಶವೆ ಬರುತ್ತಿರಲಿಲ್ಲ. ಈಗ ರೂಲ್ 69ರ ಅಡಿಯಲ್ಲಿ ಈ ವಿಷಯದ ಬಗ್ಗೆ ವಿಸ್ತಾರವಾಗಿ ಚರ್ಚೆ ಮಾಡಬೇಕಾಗುತ್ತದೆ. ಡಾ: ರಾಜ್‌ಕುಮಾರ್ ಬಿಡುಗಡೆ ಆದ ನಂತರ ಪತ್ರಿಕೆಗಳಲ್ಲಿ ವಿಚಿತ್ರವಾದ ಸುದ್ದಿಗಳು ಬರುತ್ತಿವೆ. ಆದರೆ ಈ ವಿಷಯದ ಬಗ್ಗೆ ಸರ್ಕಾರದ ಕಡೆಯಿಂದ ಬಾಯಿ ಬಿಡುತ್ತಿಲ್ಲ. ಇದರಿಂದ ಸಾರ್ವಜನಿಕರಿಗೆ ಸರಿಯಾದ ಮಾಹಿತಿ ಸಿಗುತ್ತಿಲ್ಲ. ನೀವು ಕೇವಲ ಸದನದಲ್ಲಿ ಕುಳಿತುಕೊಂಡು ಬರುತ್ತಿದ್ದೀರೆಂದು ಹೊರಗಡೆ ಜನರು ನಮ್ಮನ್ನು ಕೇಳುತ್ತಿದ್ದಾರೆ. ಈ ವಿಷಯದ ಬಗ್ಗೆ ಮಾಧ್ಯಮಗಳು ಕಲ್ಪನೆ ಮಾಡಿಕೊಂಡು ಬರೆಯುತ್ತಿದ್ದಾರೆಯೋ ಅಥವಾ ಸರಿಯಾದದನ್ನು ಬರೆಯುತ್ತಿದ್ದಾರೆಂದೋ ಎಂಬುದು ಸಹ ನಮಗೆ ಗೊತ್ತಿಲ್ಲ. ಈ ವಿಷಯವನ್ನು ರಾಜ್ಯದ ಜನತೆಗೆ ತಿಳಿಸುವುದಕ್ಕೋಸ್ಕರ ಇದನ್ನು ನಿಲುವಳಿ ಸೂಚನೆ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮಗೆ ಈಗಾಗಲೇ ನೋಟೀಸ್ ಕೊಟ್ಟಿದ್ದೇವೆ. ಆದ್ದರಿಂದ ಇದನ್ನು ಮೆನ್‌ಷನ್ ಮಾಡುವುದಕ್ಕಾದರೂ ಅನುಮತಿ ಕೊಡಿ. ಆ ನಂತರ ತಾವು ಇದರ ಬಗ್ಗೆ ತೀರ್ಪು ಕೊಡಿ.

ಅಧ್ಯಕ್ಷರು :— ಈ ವಿಷಯದ ಬಗ್ಗೆ ಚರ್ಚೆ ಮಾಡಲು ತಾವು ಮತ್ತು ಸನ್ಮಾನ್ಯ ಜಗದೀಶ್ ಶೆಟ್ಟರ್ ಮತ್ತು ಸನ್ಮಾನ್ಯ ಸದಾನಂದಗೌಡರು ಪ್ರಸ್ತಾವನೆಯನ್ನು ಕೊಟ್ಟಿದ್ದೀರಿ. ತಾವೆಲ್ಲರೂ ಮೆನ್‌ಷನ್ ಮಾಡಿದ ಮೇಲೆ ಅವಕಾಶ ಕೊಡದಿದ್ದರೆ ಅದರಲ್ಲಿ ಅರ್ಥ ಏನಿದೆ. ಆದ್ದರಿಂದ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕಾಗಿ ಒಂದು ಪ್ರತ್ಯೇಕವಾದ ಸಮಯವನ್ನು ಕೊಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿರುವ ಮಧ್ಯದಲ್ಲಿಯೇ ತಾವು ತೀರ್ಪು ಕೊಟ್ಟರೆ ಹೇಗೆ? ಇದು ಸರಿಯೆ? ತಾವು ನಮ್ಮ ರಕ್ಷಣೆಗೆ ಬರದೇ ಇದ್ದರೆ ನಾವು ವಿರೋಧಪಕ್ಷದಲ್ಲಿದ್ದುಕೊಂಡು ಯಾವ ರೀತಿ ಕೆಲಸ ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು :— ಈ ವಿಷಯದ ಬಗ್ಗೆ ಚರ್ಚೆ ಮಾಡಲು ಪ್ರತ್ಯೇಕವಾಗಿ ಸಮಯವನ್ನು ನಿಗದಿ ಮಾಡಿದ ನಂತರ ನೀವು ಮೂರು ಜನರು ಮಾತನಾಡುವುದಕ್ಕೆ ಸಮಯ ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಅಧ್ಯಕ್ಷರ ಅಧಿಕಾರವನ್ನು ಪ್ರಶ್ನೆ ಮಾಡತಕ್ಕಂಥದ್ದು ಸತ್ಸಂಪ್ರದಾಯವಲ್ಲ.

ಶ್ರೀ ಅರಗ ಜ್ಞಾನೇಂದ್ರ :— ಅಧ್ಯಕ್ಷರ ಅಧಿಕಾರವನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಯವರು ಹೇಳಿರತಕ್ಕಂಥದ್ದು ಕಡತದಲ್ಲಿ ಸರಿಯಾಗಬೇಕು. ನಿಮ್ಮ ಮೇಲೆ ಅವರಿಗೆಷ್ಟು ಗೌರವ ಇದೆಯೋ, ಅದೇ ರೀತಿ ನಮಗೂ ಕೂಡ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ :— ನೀವು ಹೇಳಿರುವುದನ್ನೆಲ್ಲಾವನ್ನೂ ನಾವು ಈಗಾಗಲೇ ಕೇಳಿದ್ದೇವೆ. ಆದ್ದರಿಂದ ಈಗ ನಾವು ಏನು ಹೇಳಬೇಕೋ ಅದನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಹಕ್ಕುಚ್ಯುತಿ ಪ್ರಸ್ತಾವದ ಬಗ್ಗೆ ನೋಟೀಸ್ ಕೊಟ್ಟಿದ್ದಕ್ಕೆ ತಾವು ತಮ್ಮ ತೀರ್ಪನ್ನು ಪತ್ರದ ಮುಖೇನ ಬರೆದು ಕಳುಹಿಸಿಕೊಡುವುದಾದರೆ, ನಾವೇಕೆ ನೋಟೀಸ್ ಕೊಡಬೇಕೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಮಾನ್ಯ ಅಧ್ಯಕ್ಷರಿಗೆ ಯಾವ ವಿಷಯ ಹಕ್ಕುಚ್ಯುತಿ ಆಗುವುದಿಲ್ಲವೆಂದು ಮನವರಿಕೆಯಾದಮೇಲೆ, ಆ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸುವ ರೀತಿಯಲ್ಲಿ ಮಾನ್ಯ ಅಧ್ಯಕ್ಷರು ತಿಳಿಸಿದ್ದಾರೆ. ಇವತ್ತು ಕೂಡ ಈ ವಿಷಯ ನಿಲುವಳಿ ಸೂಚನೆಯಾಗುವುದಿಲ್ಲವೆಂದು ತಿಳಿಸಿ, ಇದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡಬಹುದು ಮಾನ್ಯ ಅಧ್ಯಕ್ಷರು ತಿಳಿಸಿದ್ದಾರೆ. ಹಾಗೆಯೇ ಈ ವಿಷಯದ ಬಗ್ಗೆ ಹೇಳಿಕೆ ಮಾಡುತ್ತೇವೆ. ಅನಂತರ ಈ ವಿಷಯದ ಬಗ್ಗೆ ಚರ್ಚೆ ಮಾಡಬಹುದೆಂದು ಸನ್ಮಾನ್ಯ ಸಭಾನಾಯಕರು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗೆಯೇ ಇವೆಲ್ಲದಕ್ಕಿಂತ ಮುಖ್ಯವಾಗಿ ಇವತ್ತು ಸಾಯಂಕಾಲ ಪ್ರತಿಪಕ್ಷದ ನಾಯಕರ ಸಭೆ ಕರೆದು ಈ ವಿಷಯದ ಬಗ್ಗೆ ಚರ್ಚೆ ಮಾಡುತ್ತೇವೆಂದು ಸಹ ಹೇಳಿದ್ದಾರೆ. ಡಾ: ರಾಜ್‌ಕುಮಾರ್ ಬಿಡುಗಡೆ ವಿಷಯದ ಎಲ್ಲಾ ಪ್ರಕ್ರಿಯೆಗಳಲ್ಲಿ ಇವರೂ ಕೂಡ ಪಾಲುದಾರರೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಏಕೆಂದರೆ, ಡಾ: ರಾಜ್‌ಕುಮಾರ್‌ರವರನ್ನು ಬಿಡಿಸುವುದರಲ್ಲಿ ಸರ್ಕಾರಕ್ಕೆ ಎಷ್ಟು ಕೀರ್ತಿ ಲಭಿಸಿದೆಯೋ, ಅಷ್ಟೇ ಕೀರ್ತಿ ಇವರಿಗೂ ಸಹ ಲಭಿಸುತ್ತದೆ. ಈ ವಿಷಯದ ಬಗ್ಗೆ ನಾವು ಎಷ್ಟು ಸಂತೋಷವನ್ನು ಹಂಚುಕೊಂಡಿದ್ದೇವೆಯೋ ಅಷ್ಟೇ

ಸಂತೋಷವನ್ನು ಪ್ರತಿಪಕ್ಷದ ನಾಯಕರು ಹಂಚಿಕೊಂಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡಬೇಕೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ತಾವು ಕೊಟ್ಟಂಥ ತೀರ್ಪನ್ನು ಪ್ರಶ್ನೆ ಮಾಡಿ ಮತ್ತೆ ಮತ್ತೆ ಮಧ್ಯ ಪ್ರವೇಶ ಮಾಡುವುದು ಒಳ್ಳೆಯ ಬೆಳವಣಿಗೆ ಆಗುವುದಿಲ್ಲವೆಂದು ನನಗನ್ನಿಸುತ್ತದೆ.

ಶ್ರೀ ಜಗದೀಶ್ ಶೆಟ್ಟರ್:— ಮಾನ್ಯ ಅಧ್ಯಕ್ಷರು ಒಂದು ಸಲ ತೀರ್ಮಾನ ಕೊಟ್ಟಮೇಲೆ ನಾವು ಮತ್ತೆ ಅದನ್ನು ಚಾಲೆಂಜ್ ಮಾಡುತ್ತಿಲ್ಲ. ಈ ಸದನದ ಸಂಪ್ರದಾಯದ ಬಗ್ಗೆ ಮತ್ತು ಪದ್ಧತಿ ಹಾಗೂ ಅಧ್ಯಕ್ಷರ ಅಧಿಕಾರದ ಬಗ್ಗೆ ನಾವು ಪ್ರಶ್ನೆ ಎತ್ತಿಲ್ಲ. ಇವತ್ತಿನ ದಿವಸ ಆಡಳಿತ ಪಕ್ಷದವರಿಗಿಂತ ಪ್ರತಿಪಕ್ಷದವರಿಗೆ ಹೆಚ್ಚಿನ ರಕ್ಷಣೆ ಅದರಿಂದ ಸಿಗಬೇಕು.

ಅಧ್ಯಕ್ಷರು:— ಆಡಳಿತ ಪಕ್ಷದವರಿಗಿಂತ ಪ್ರತಿ ಪಕ್ಷದವರಿಗೆ ಹೆಚ್ಚಿನ ರಕ್ಷಣೆಯನ್ನು ಕೊಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:— ನಿಮ್ಮ ಪೀಠಕ್ಕೆ ಮತ್ತು ನಿಮ್ಮ ಸ್ಥಾನಮಾನಕ್ಕೆ ಚ್ಯುತಿ ತರತಕ್ಕಂಥ ಕೆಲಸವನ್ನು ನಾವು ಮಾಡುವುದಿಲ್ಲ. ಒಂದು ಸಲ ತಾವು ರೂಲಿಂಗ್ ಕೊಟ್ಟಮೇಲೆ ಅದರ ಬಗ್ಗೆ ನಾವೆಂದು ಚಾಲೆಂಜ್ ಮಾಡುವುದಿಲ್ಲ. ಮೊನ್ನೆದಿವಸ ಹಕ್ಕುಚ್ಯುತಿ ಬಗ್ಗೆ ತಂದಿರತಕ್ಕಂಥ ಪ್ರಸ್ತಾವನೆಗೆ ಸಂಬಂಧಪಟ್ಟಂತೆ ಹಾಗೂ ಈ ದಿನ ತಂದಿರತಕ್ಕಂಥ ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ ಮೊದಲು ನಿಮ್ಮ ಮನಸ್ಸನ್ನು ಒಲಿಸಿಕೊಂಡು ನಮ್ಮ ಭಾವನೆಗಳನ್ನು ನಿಮ್ಮಲ್ಲಿ ಹಂಚಿಕೊಳ್ಳತಕ್ಕಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಆದರೆ ಸನ್ಮಾನ್ಯ ಚಂದ್ರೇಗೌಡರು ಹೇಳಿದ ಪ್ರಕಾರ ನಿಮ್ಮ ಯಾವುದೇ ರೂಲಿಂಗ್‌ನ್ನು ನಾವು ಚಾಲೆಂಜ್ ಮಾಡುತ್ತಿಲ್ಲ. ಮೊನ್ನೆ ದಿವಸ ತಾವು ಹೇಳದ ಮೇಲೂ ಕೂಡ ಕೆಲವೊಂದು ವಿಷಯವನ್ನು ಸನ್ಮಾನ್ಯ ರಂಗನಾಥ್‌ರವರು ಪ್ರಸ್ತಾಪ ಮಾಡಿದರು. ಆದರೆ, ನಾವು ಆ ಮಟ್ಟಕ್ಕೆ ಹೋಗುವುದಿಲ್ಲ. ಚರ್ಚೆಗೆ ಅವಕಾಶ ಸಿಗಬೇಕೆಂಬುದು ನಮ್ಮ ಮುಖ್ಯ ಪ್ರಶ್ನೆಯಾಗಿದೆ. ಪ್ರತಿ ಪಕ್ಷದ ನಾಯಕರು ಒಂದು ವಿಷಯದ ಮೇಲೆ ಮೆನ್‌ಷನ್ ಮಾಡಿದ ನಂತರ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ರೂಲಿಂಗ್ ಕೊಡತಕ್ಕಂಥ ಅಧಿಕಾರ ನಿಮಗೆ ಇದೆ. ಇವತ್ತಿನ ದಿವಸ ತಾವು ಏನೇ ರೂಲಿಂಗ್ ಕೊಟ್ಟರೂ ಸಹ ಅದು ನಮಗೆ ಬೈಂಡಿಂಗ್ ಆಗುತ್ತದೆ. ಕೊನೇಪಕ್ಷ ತಾವು ರೂಲಿಂಗ್ ಕೊಡುವುದಕ್ಕಿಂತ ಮುಂಚಿತವಾಗಿ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಮ್ಮ ಕಳಕಳಿಯಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆ ಕೊಡುತ್ತಾರೆ, ಆ ನಂತರ ಚರ್ಚೆ ಅವಕಾಶ ಕೊಡುತ್ತೇನೆಂದು ತಾವು ಹೇಳಿದ್ದೀರಿ. ಆದ್ದರಿಂದ ಇವತ್ತು ರೈತರು ಬೆಳೆದಿರತಕ್ಕಂಥ ಕೃಷಿಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಚರ್ಚೆಯನ್ನು ಮುಗಿಸೋಣ. ನಾಳೆ ಬೆಳಿಗ್ಗೆ ಆದ್ಮತೆ ಮೇಲೆ ಈ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕಾನೂನು ಮಂತ್ರಿಯವರು ಇಲ್ಲಿ ಇರುವುದರಿಂದ ಸದನದ ನಿಯಮಾವಳಿಯ ರೂಲ್ 64 ಅನ್ನು ನಾನು ಇಲ್ಲಿ ಓದುವುದಕ್ಕೆ ಇಷ್ಟಪಡುತ್ತೇನೆ. ತಾವು ದಯವಿಟ್ಟು ಅವಕಾಶ ಕೊಡಬೇಕು. ಅಕೆಡೆಮಿಕ್ ಆಸಕ್ತಿಯಿಂದ ನಾನು ಇದನ್ನು ಓದುತ್ತಿದ್ದೇನೆ.

ಅಧ್ಯಕ್ಷರು :— ಈ ವಿಷಯವನ್ನು ಸನ್ಮಾನ್ಯ ಜಗದೀಶ್ ಶೆಟ್ಟರ್ ಈಗಾಗಲೇ ಹೇಳಿದ್ದಾರೆ ಆದರೆ, ನೀವು ಮತ್ತೆ ಏಕೆ ಅದನ್ನು ಪ್ರಸ್ತಾಪ ಮಾಡುತ್ತಿದ್ದೀರಿ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಸನ್ಮಾನ್ಯ ಸದಾನಂದಗೌಡರು, ರೂಲ್ 64 ಅನ್ನು ಓದುವುದಕ್ಕಿಂತ ರೂಲ್ 60 ಅನ್ನು ಓದಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸದಸ್ಯರನ್ನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :— ಈ ವಿಷಯವನ್ನು ಆದ್ಯತೆಯ ಮೇಲೆ ನಾಳೆ ಬೆಳಗ್ಗೆ ತೆಗೆದುಕೊಳ್ಳಬೇಕೆಂದು ನಿಮ್ಮ ನಾಯಕರು ಹೇಳಿದ ಮೇಲೂ ಕೂಡ ನೀವು ಮತ್ತೆ ಏಕೆ ರೂಲ್ ಅನ್ನು ಓದುವುದಕ್ಕೆ ಹೋಗುತ್ತಿದ್ದೀರಿ?

ಶ್ರೀ ಡಿ.ವಿ. ಸದಾನಂದಗೌಡ :— ನಮ್ಮ ನಾಯಕರು ಬಹಳ ಒಳ್ಳೆಯವರು ಆದ್ದರಿಂದ ಈ ಪರಿಸ್ಥಿತಿ ಉಂಟಾಗಿದೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ್ :— ಹಾಗಾದರೆ, ಅವರು ಮಾತ್ರ ಒಳ್ಳೆಯವರು, ನಾವೆಲ್ಲಾ ಕೆಟ್ಟವರೆ?

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ :— ನಮ್ಮ ನಾಯಕರ ಸೌಜನ್ಯತೆ ಇವತ್ತು ಸ್ವಲ್ಪ ಜಾಸ್ತಿಯಾಗಿದೆ.

ಅಧ್ಯಕ್ಷರು :— ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪಿಕೊಂಡಿರುವಂತೆ ನಾಳೆ ಈ ವಿಷಯಕ್ಕೆ ನಾನು ಪ್ರಿಯಾರಿಟಿ ಕೊಡುವುದರ ಬಗ್ಗೆ ಸರ್ಕಾರದ ಜೊತೆಯಲ್ಲಿ ಆಲೋಚನೆ ಮಾಡಿ ನಾನು ಪುನಃ ತಮಗೆ ಹೇಳುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ :— ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದಾಗಿ, ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಾಗಿರುವುದಿಲ್ಲ, ಸರ್ಕಾರ ಇದನ್ನು ತಪ್ಪಿಸಬೇಕೆಂದು ಮಾಡುತ್ತಿದೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಒಪ್ಪಿಕೊಂಡರು, ಇವರು ಈ ರೀತಿಯಾಗಿ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :— ಇದರ ಬಗ್ಗೆ ಸರ್ಕಾರ ಪ್ರಿಯಾರಿಟಿ ಮೇಲೆ ಚರ್ಚೆಯಾಗಬೇಕಾಗಿತ್ತು. ಅವರು ಒಪ್ಪಿಕೊಳ್ಳಲಿಲ್ಲ, ಇದರ ಬಗ್ಗೆ ಸರ್ಕಾರ ಏನು ಹೇಳುತ್ತಿಲ್ಲ.

ಅಧ್ಯಕ್ಷರು :— ನಾನು ಅವರನ್ನು ಪ್ರಿಯಾರಿಟಿ ಬಗ್ಗೆ ಕನ್ಸಲ್ಟ್‌ಮಾಡಿ ಹೇಳುತ್ತೇನೆಂದು ಹೇಳಿರುತ್ತೇನೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾಳೇ ಬೆಳಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಸ್ಟೇಟ್ ಮೆಂಟ್ ಮಾಡುತ್ತಾರೆ. ನಂತರ ಇದರ ಬಗ್ಗೆ ಚರ್ಚೆಯನ್ನು ಮಾಡೋಣ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಭಾರತೀಯ ಜನತಾಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರು ಹೇಳಿದಂತೆ ನಾವು ಒಪ್ಪಿಕೊಂಡರು ಕೂಡ ವಿರೋಧಪಕ್ಷದ ನಾಯಕರು ಸಭಾತ್ಯಾಗ ಮಾಡಿದರು, ಇದರ ಅರ್ಥ ಏನು? ನಾಳೆ ಮುಂಜಾನೆ ಅವರೇ ಸ್ಟೇಟ್ ಮೆಂಟ್ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಈ ರೀತಿ ಸಭಾತ್ಯಾಗ ಮಾಡುವುದು ಸರಿಯಾಗಿ ಕಾಣುವುದಿಲ್ಲ. ಇದರ ಬಗ್ಗೆ ತಾವು ಒಪ್ಪಿಕೊಂಡಿದ್ದು, ಸರ್ಕಾರವು ಒಪ್ಪಿಕೊಂಡಿದ್ದು, ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪಿಕೊಂಡಿದ್ದಾರೆ. ಇವರು ಯಾರ ವಿರುದ್ಧ ಸಭಾತ್ಯಾಗ ಮಾಡುತ್ತಾರೆ. ಸ್ಪೀಕರ್ ವಿರುದ್ಧವೇ ಅಥವಾ ಸರ್ಕಾರದ ವಿರುದ್ಧವೇ? if it is against the speaker, Iam very sorry. ಸಭಾತ್ಯಾಗ ಮಾಡುವುದು ಉದ್ಧಟತನವಾಗುತ್ತದೆ, ಕ್ಷಮಿಸಬೇಕು, ಈ ರೀತಿ ಹೇಳದೆ ನನಗೆ ಬೇರೆ ಮಾರ್ಗ ಇರುವುದಿಲ್ಲ.